(ಉ) ಕಂಪನಿಯ ಗ್ರಾಹಕರು ಮತ್ತು ಹಣಕಾಸು ಸಂಸ್ಥೆಗಳ ಹಿರಿಯ ಅಧಿಕಾರಿಗಳು, ವಿದೇಶಿ ತಂತ್ರಜ್ಞರು, ಸಲಹೆಗಾರರು, ಇಂತಹ ವ್ಯಕ್ತಿಗಳೊಡನೆ ನಿಕಟ ಸಂಪರ್ಕ ಇರಿಸಿಕೊಳ್ಳಬೇಕಾದ ಪ್ರಮೇಯಗಳು ಖಾಸಗಿ ರಂಗದ ಮತ್ತು ಸಾರ್ವಜನಿಕ ರಂಗದ ಬಾರಿ ಉದ್ಯಮಿಗಳಿಗೆ ಅವಶ್ಯಕತೆಯಿರುವುದನ್ನು ಗಮನಿಸಿ ಅಂತವುದೇ ಸಂಸ್ಥೆಯಾದ ಮೈಸೂರು ಕಾಗದದ ಕಾರ್ಖಾನೆಯನ್ನು ಬೆಂಗಳೂರು ಕ್ಲಬ್‌ನ ಕಾರ್ಪೊರೇಟ್ ಸದಸ್ಯನಾಗಿ ಸೇರಿದೆ.

ಮೈಸೂರು ಕಾಗದ ಕಾರ್ಖಾನೆಯು ವಿಪ್ರೊಗೆ ಕೊಟ್ಟ ಹಣ

೧೪. ಶ್ರೀ ಸಿ. ಬೈರೇಗೌಡ (ವೇಮಗಲ್) .—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೯೯ರ ಆಗಸ್ಟ್‌ನಲ್ಲಿ ಮೈಸೂರು ಕಾಗದ ಕಾರ್ಖಾನೆಯು ವಿಪ್ರೊನಿಂದ ಕಂಪ್ಯೂಟರು ಖರೀದಿಸಿರುವುದು ನಿಜವೇ ;

ಆ) ಹಾಗಿದ್ದಲ್ಲಿ ಮೇಲ್ಕಂಡ ಖರೀದಿಗೆ ಮೈಸೂರು ಕಾಗದ ಕಾರ್ಖಾನೆ ಕೊಟ್ಟ ಹಣವೆಷ್ಟು.

ಇ) ಈ ಖರೀದಿಗೆ ಸಂಬಂಧಿಸಿದಂತೆ ಮೈಸೂರು ಕಾಗದ ಕಾರ್ಖಾನೆ ಟೆಂಡರ್ ಹಾಗೂ ಕೊಟೇಷನ್ ಕರೆದಿತ್ತೆ.

ಈ) ಈ ಖರೀದಿಗೆ ಮೈಸೂರು ಕಾಗದ ಕಾರ್ಖಾನೆ ಹಣವನ್ನು ಮುಂಗಡವಾಗಿ ಕೊಟ್ಟಿತ್ತೆ.

ಉ) ಮೈಸೂರು ಕಾಗದ ಕಾರ್ಖಾನೆ ಬೆಂಗಳೂರು ಹಾಗೂ ಭದ್ರಾವತಿಯಲ್ಲಿ ಕಂಪ್ಯೂಟರನ್ನು ಯಾವ ದಿನಾಂಕದಂದು ಪಡೆಯಿತು.

ಊ) ಮೈಸೂರು ಕಾಗದ ಕಾರ್ಖಾನೆಯು ಕಂಪ್ಯೂಟರನ್ನು ಅಳವಡಿಸಲು ಸಿವಿಲ್ ಕಾಮಗಾರಿ ಮತ್ತು ವಿದ್ಯುಚ್ಛಕ್ತಿ ಕಾಮಗಾರಿ ಯಾವ ದಿನಾಂಕದಂದು ಪೂರ್ಣಗೊಳಿಸಲಾಯಿತು ;

ಋ) ಮೈಸೂರು ಕಾಗದ ಕಾರ್ಖಾನೆ ಭದ್ರಾವತಿ ಹಾಗೂ ಬೆಂಗಳೂರಿನಲ್ಲಿ ಯಾವ ದಿನದಂದು ಕಂಪ್ಯೂಟರ್ ಕಾರ್ಯಾರಂಭ ಮಾಡಿತು :

ಋೂ) ಮೈಸೂರು ಕಾಗದ ಕಾರ್ಖಾನೆಯಲ್ಲಿ ಕಂಪ್ಯೂಟರ್ ಬರುವ ಮೊದಲೇ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಲಾಯಿತೆ ; ಇಲ್ಲವಾದರೆ ಸಾಫ್ಟ್‌ವೇರ್ ಯಾವಾಗ ಸಿದ್ಧವಾಗುತ್ತಿದೆ.

ಎ) ಕಂಪ್ಯೂಟರ್‌ಗಳನ್ನು ಕೆಲಸವಿಲ್ಲದೆ ಒಟ್ಟು ಸಾಫ್ಟ್‌ವೇರ್ ಅಭಿವೃದ್ಧಿಪಡಿಸದೆ ಮೈಸೂರು ಕಾಗದ ಕಾರ್ಖಾನೆ ನಷ್ಟವಾಗಿದ್ದಲ್ಲಿ ಅದಕ್ಕೆ ಕಾರಣರ್ಯಾರು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) .—

ಅ) ಹೌದು

ಆ) ರೂ. ೧೮.೦೦ ಲಕ್ಷ

ಇ) ಹೌದು

ಈ) ಹೌದು, ರೂ. ೧೮.೦೦ ಲಕ್ಷ

ಉ) ಕಂಪ್ಯೂಟರ್‌ಗಳನ್ನು ಬೆಂಗಳೂರಿನಲ್ಲಿ ೨–೧೦–೧೯೯೯ ರಂದು ಸ್ವೀಕರಿಸಲಾಯಿತು ಮತ್ತು ಕೆಲವು ದಿನಗಳ ನಂತರ ಭದ್ರಾವತಿಗೆ ಕಳಿಸಿ ಕೊಡಲಾಯಿತು.

ಊ) ಈ ಕಂಪ್ಯೂಟರ್‌ಗಳಿಗಾಗಿ ಕಾಮಗಾರಿಗಳನ್ನು ಏಪ್ರಿಲ್ ೯೦ ರಲ್ಲಿ ಪೂರ್ಣಗೊಳಿಸಲಾಯಿತು .

ಋ) ಮೇ ೧೯೯೦

ಋೂ) ಹೌದು

ಎ) ಉದ್ಭವಿಸುವುದಿಲ್ಲ.